ನಕ್ಷತ್ರ ಪಟ

ಜನ್ನು ಪ್ರಪಂಚ

# ಪಟದಲ್ಲಿದ್ದ ಶ್ರೀರಾಮಚಂದ್ರ ನಕ್ಕುಬಿಟ್ಟ



**ಸೌಮ್ಯ ಪ್ರಭು ಕಲ್ಯಾಣ್ಕರ್**

ಕಲೆ: ಸಂತೋಷ್ ಸಸಿಹಿತ್ಲು

ಕನ್ನಡ ಸಾಹಿತ್ಯದಲ್ಲಿನ ಅಪೌಷ್ಟಿಕ ಪ್ರಕಾರಗಳಲ್ಲಿ ಮಕ್ಕಳ ಸಾಹಿತ್ಯವೊಂದಾದರೆ, ಮಕ್ಕಳ ಸಾಹಿತ್ಯದಲ್ಲಿ ಸೊರಗಿರುವ ಪ್ರಕಾರ ಕಾದಂಬರಿಯದ್ದು. ಮಕ್ಕಳ ಕಾದಂಬರಿ ಹೆಸರಿನ ಬಹುತೇಕ ಕೃತಿಗಳು ನೀಳ್ಗತೆಗಳು ಆಗಿರುತ್ತವೆ ಇಲ್ಲವೇ ಮೂಗಿಗಿಂತ ಮೂಗುತಿ ಭಾರ ಎನ್ನುವಂತಿರುತ್ತವೆ. ಕಾದಂಬರಿ ಪ್ರಕಾರದ ಸಾಧ್ಯತೆಗಳನ್ನು ಒಳಗೊಂಡು, ಮಕ್ಕಳ ಮನಸ್ಸಿಗೂ ಇಷ್ಟವಾಗುವಂಥ ಬರವಣಿಗೆ ಸೌಮ್ಯ ಪ್ರಭು ಕಲ್ಯಾಣ್ಕರ್ ಅವರ 'ಜನ್ನು ಪ್ರಪಂಚ'ದ್ದು. ಇನ್ನೂ ವಿಸ್ತಾರಗೊಳ್ಳುತ್ತಿರುವ 'ಜನ್ನು ಪ್ರಪಂಚ'ದ ಒಂದು ಭಾಗ ಈ ಸಂಚಿಕೆಯಲ್ಲಿದ್ದು, ಮತ್ತೆರಡು ಕಥನಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟಗೊಳ್ಳಲಿವೆ.

ಜನ್ನು ಭಾರೀ ಸಿಟ್ಟಿನಲ್ಲಿ ಧುಮುಧುಮು ಕುದಿಯುತ್ತಿದ್ದ. ಅಮ್ಮನ ಮೇಲೆ ಕೆಂಡದಂತಹ ಕೋಪ. ಅಮ್ಮ ನನಗಿಷ್ಟದ ಪುಂಡಿ ಮಾಡದೇ ಇಡ್ಲಿ ಮಾಡಿದ್ದಾಳೆ ಅಂತ ಸಿಟ್ಟು ಅವನಿಗೆ. ಅದನ್ನೂ ಒತ್ತಾಯದಿಂದ ತುರುಕಿಸಿದ್ದಳು ಬಾಯಿಗೆ, ದೊಡ್ಡ ಕಣ್ಣು ತೋರಿಸಿ. ಅಪ್ಪ-ಅಜ್ಜಿ ಅಲ್ಲೇ ಕೂತು ಉಪದೇಶ ಮಾಡಿದ್ದರಿಂದ ಬಲವಂತವಾಗಿ ನುಂಗಿದ್ದ. ಕಣ್ಣ ತುಂಬಾ ನೀರು, ಅಮ್ಮ ಕೂಡಾ ಹೀಗೆ ಮಾಡಬಹುದಾ ಅಂತ ಹತಾಶೆ ಜನ್ನುವಿಗೆ. ಅಜ್ಜಿ-ಅಪ್ಪ ಹೊರ ಹೋದ ಕೂಡಲೇ, 'ಅಮ್ಮ ನೀ ಚೆಂದಿಲ್ಲ, ಚಿಚ್ಚಿ' ಎಂದರಚಿದ. ಅಮ್ಮ ಏನೂ ಮಾತಾಡದೆ ನಕ್ಕರು, ಜೊತೆಗೆ ಅಲ್ಲೇ ಮೆಟ್ಟುಗತ್ತಿಯಲ್ಲಿ ಸೌತೆ ಕೊಯ್ಯುತ್ತಿದ್ದ ದೇವಕಿಯತ್ತೆ ಕೂಡಾ ನಕ್ಕರು. ಇನ್ನಷ್ಟು ಸಿಟ್ಟು ಬಂತು, ಸಿಟ್ಟಿಗಿಂತ ಜಾಸ್ತಿ ಅವಮಾನ. ಇಬ್ಬರೂ ಸೇರಿ ನಕ್ಕರಲ್ಲ ಅಂತ. 'ಅಮ್ಮ ನೀ ನಗಬೇಡ, ಅತ್ತೆ, ನೀನೂ ನಗಬೇಡ... ಇಬ್ಬರೂ ತುಂಬಾ ತುಂಬಾ ತುಂಬಾ ಅಂದ್ರೆ ತುಂಬಾ ಕೆಟ್ಟೋರು. ಇಬ್ಬರೂ ಚೆಂದಿಲ್ಲ, ನಾ ಮಾತಾಡಲ್ಲ. ಟೂ ಟೂ' ಅಂತ ಅಳುವ ಸ್ವರದಲ್ಲಿ ಬೊಬ್ಬೆ

